**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ *48/2014*</u>**

ದಿನಾಂಕಃ *07.06.2023*
*(ಸಾಕ್ಷಿಗೆ ಪ್ರಮಾಣ **ಮಾಡಿಸಲಾಯಿತು.**)*

ಪ್ರಾ.ಸಾಃ *10* (ಚಾ.ಸಾ *23* )

| | | |
|---|---|---|
| ಹೆಸರು | ಃ | ಸೈಯದ್ ನಿಜಾಮುದ್ದೀನ್ |
| ತಂದೆಯ ಹೆಸರು | ಃ | ಲೇಟ್ ಸೈಯದ್ ಮೆಹಬೂಬ್ |
| ವಯಸ್ಸು | ಃ | *67* ವರ್ಷ |
| ಉದ್ಯೋಗ | ಃ | ನಿವೃತ್ತ ಡಿ ವೈ ಎಸ್ ಪಿ |
| ವಾಸ ಸ್ಥಳ | ಃ | **ಹೆಚ್ ಬಿ ಆರ್ ಲೇ ಔಟ್ ಬೆಂಗಳೂರು** |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

ನಾನು ದಿ.*09.06.2011* ರಿಂದ ದಿ.*30.09.2013* ರ ವರೆಗೂ ಡಿ ವೈ ಎಸ್ ಪಿ ಲೋಕಾಯುಕ್ತ ರಾಮನಗರ ಇಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

*2.* ದಿ.*12.12.2011* ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-*32* ಇವರಿಂದ ಪಡೆದುಕೊಂಡು ದಿ.*12.12.2011* ರಂದು ಚಾಸಾ-*13* ಹರಿಪ್ರಸಾದ್ ಇವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿ.*18.04.2012* ರಂದು ಚಾಸಾ-*5* ಜಯರಾಮ್ ಇವರ ಹೇಳಿಕೆ ಪಡೆದುಕೊಂಡಿದ್ದೇನೆ ಮತ್ತು ಚಾಸಾ-*1* ಗುರುರಾಜ್ ಇವರ ಮರುಹೇಳಿಕೆ ಪಡೆದುಕೊಂಡಿದ್ದೇನೆ.

*3.* ದಿ.*27.04.2012* ರಂದು ಚಾಸಾ-*7* ನಟೇಶ್ ತಹಸಿಲ್ದಾರ್ ಇವರ ಹೇಳಿಕೆ ಪಡೆದುಕೊಂಡಿದ್ದೇನೆ. ದಿ.*02.05.2012* ರಂದು ಚಾಸಾ-*14* ಪ್ರಕಾಶ್ ಇವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿ.*20.04.2012* ರಂದು ಆರೋಪಿಗಳು

ನಿರ್ವಹಿಸುತ್ತಿದ್ದ ಕರ್ತವ್ಯದ ವಿವರವನ್ನು ಚಾಸಾ-*9* ಕಳುಹಿಸಿಕೊಟ್ಟಿದ್ದು ಅವುಗಳನ್ನು ಪಡೆದುಕೊಂಡಿದ್ದೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು ನಿಪಿ-*41* ಮತ್ತು ನಿಪಿ-*42* ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ-*41* ಎ ಮತ್ತು ನಿಪಿ-*42* ಎ ಎಂದು ಗುರುತಿಸಲಾಯಿತು.

*3.* ಚಾಸಾ-*1* ನನ್ನ ಮುಂದೆ ನಿಪಿ-*24* ರಂತೆ ಮರು ಹೇಳಿಕೆ ಕೊಟ್ಟಿರುತ್ತಾರೆ. ಚಾಸಾ-*13* ನನ್ನ ಮುಂದೆ ನಿಪಿ-*40* ರಂತೆ ಹೇಳಿಕೆ ಕೊಟ್ಟಿರುತ್ತಾರೆ. ಪ್ರಕರಣದ ಮುಂದಿನ ತನಿಖೆಯನ್ನು ದಿ.*13.09.2013* ರಂದು, ನನಗೆ ವರ್ಗಾಣೆ ಆದ್ದರಿಂದ ಚಾಸಾ-*24* ಇವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಂ ವಕೀಲರಿಂದಃ**

*2.* ನಾನು ತನಿಖೆ ವಹಿಸಿಕೊಂಡ ಮೇಲೆ ನಾನು ಖುದ್ದಾಗಿ ತಹಸಿಲ್ದಾರ್ ಕಛೇರಿಗೆ ಭೇಟಿ ಕೊಟ್ಟಿಲ್ಲ ನಾನು ಶಾನ್ ಟಾಕೀಸ್ ಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದ್ದೀರಾ ಅಂದರೆ ಇಲ್ಲ. ತಹಸಿಲ್ದಾರ್ ಪಿರ್ಯಾದಿಯ ಖಾತೆಯನ್ನು ರುದ್ದು ಗೊಳಿಸಿದ್ದರು ಅಂದರೆ ಅದರ ಬಗ್ಗೆ ಗೊತ್ತಿಲ್ಲ. ಅದರ ಬಗ್ಗೆ ಮಾಹಿತಿ ಪಡೆಯಲು ಪ್ರಯತ್ನ ಮಾಡಿದ್ದೀರಾ ಅಂದರೆ ಇಲ್ಲ. ಭೂಮಿ ಕೇಂದ್ರದಲ್ಲಿ ಯಾರು ಅರ್ಜಿ ತೆಗೆದುಕೊಳ್ಳುತ್ತಿದ್ದರು, ಯಾರು ಖಾತೆ ಮಾಡಲು ರೆಕಮಂಡ್ ಮಾಡುತ್ತಿದ್ದರು ಮತ್ತು ಯಾರಿಗೆ ಖಾತೆ ಮಾಡುವ ಅಧಿಕಾರ ಇತ್ತು ಎಂದು ವಿಚಾರಿಸಿದ್ದೀರಾ ಅಂದರೆ ಇಲ್ಲ. ಆರೋಪಿ *1* ಮತ್ತು *2* ಯಾವ ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅವರ ಕರ್ತವ್ಯ ಏನು ಇತ್ತು ಎಂದು ವಿಚಾರಿಸಿದ್ದೀರಾ ಅಂದರೆ ಇಲ್ಲ.

*3.* ಮೊಬೈಲ್ ಸಿಮ್ *9535017776* ಇದು ಯಾರ ಹೆಸರಿನಲ್ಲಿ ನೊಂದಣಿ ಆಗಿತ್ತು ಎಂಬ ಬಗ್ಗೆ ಸಂಬಂಧ ಪಟ್ಟ ಇಲಾಖೆಯಿಂದ ಮಾಹಿತಿ ಪಡೆದುಕೊಂಡಿದ್ದೀರಾ ಅಂದರೆ ಇಲ್ಲ. ಚಾಸಾ-*13* ಹರಿಪ್ರಸಾದ್ ಇವರಿಗೆ ನೋಟೀಸ್ ಕೊಟ್ಟು ಬರಲು ಹೇಳಿದ್ದೀರಾ ಅಂದರೆ ಫೋನ್ ಮೂಲಕ ತಿಳಿಸಿದ್ದೆ. ಯಾವ ನಂಬರ್ ಫೋನ್ ನಿಂದ ಯಾವ ನಂಬರ್ ಫೋನ್ ಗೆ ಮಾಹಿತಿ

ತಿಳಿಸಲಾಗಿದೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿಲ್ಲ ಅಂದರೆ ಸರಿ. ನಾನು ಯಾವುದೇ ಸಾಕ್ಷಿಗಳನ್ನು ಕಛೇರಿಗೇ ಕರೆಸಿಲ್ಲ, ಅವರ ಹೇಳಿಕೆಗಳನ್ನು ಈ ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ಕಛೇರಿಯಲ್ಲಿ ಕುಳಿತು ಸುಳ್ಳು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಚಾಸಾ-*1* ಮತ್ತು *13* ಇವರ ಮರು ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನಿಪಿ-*24* ಮತ್ತು *40* ರಂತೆ ಪಡೆದುಕೊಂಡಿದ್ದೇನೆ ಅಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಕೇಸ್ ಆದಂತಹ ಸಮಯದಲ್ಲಿ *2* ನೇ ಅರೋಪಿ ಮೋಹನ್ ಕುಮಾರ್ ಮಾಗಡಿ ತಾಲ್ಲೂಕು ಕಛೇರಿಯ ಓ ಓ ಡಿ ಆಗಿ ಕೆಲಸಮಾಡುತ್ತಿದ್ದರು ಎಂದರೇ ಆ ವಿಚಾರ ನನಗೆ ಗೊತ್ತಿಲ್ಲ.

*4.* ಆರೋಪಿ *1* ಹರ್ಷರವರು ನಿರ್ದಿಷ್ಟವಾಗಿ ಯಾವ ಬ್ರಾಂಚ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ: ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**